Sri RAJAPID NAIK.—In view of a large number of T.B. cases in Gulbarga District 10 Isolation beds provided are not at all sufficient. Will the Government be pleased to provide more beds and other facilities to the patients ?

† Sri H. SIDDAVEERAPPA.—This is a Government of India Scheme. According to the scheme they provide only 1 beds. We have other places which can be taken into consideration and get these patients treated. There is another ward in the District Hospital entirely for this purpose.

Sri RAJAPID NAIK.—Many of the Taluks in Gulbarga District are not provided with X-Ray equipment which is quite essential for detection of T.B. If so, will the Government consider and see that X-Ray plants are supplied to all the Taluks of Gulbarga District.

Sri H. SIDDAVEERAPPA.—This point will have to be examined. There is a proposal to have photos of card-size from a plant the cost of which may be less and the expenditure on this process may also be reduced to a considerable extent and make it an economic one. We will have to examine what the cost would be and whether it would be possible to provide for all the Hospitals in the State.

ಶ್ರೀ ಆರ್. ಎಸ್. ಪಾಟೀಲ್.—ಹಳ್ಳಿಗಾಡುಗಳಲ್ಲಿ ಎಷ್ಟೋ ಜನಗಳು ಈ ಖಾಯಿಲೆ ಬಂದವರು ಆಸ್ಪತ್ರೆಗಳಿಗೆ ಬಾರದೆ ಇರುವ ಕೇಸುಗಳು ಇವೆ. ಅಲ್ಲಿ ಆಸ್ಪತ್ರೆಗೆ ಬಂದವರನ್ನು ಮಾತ್ರ ಖಾಯಿಲೆ ಡಿಟೆಕ್ಟ್ ಮಾಡುತ್ತಾರೆ, ಮಲೇರಿಯಾ ಇರ್ರ್ಯಾಡಿಕೇಷನ್ ಸ್ಕೀಂ ತರಹ, ಇದನ್ನು ಯಾವುದಾದರೂ ಒಂದು ಸ್ಕೀಂ ತಗೆದುಕೊಂಡು ನಿರ್ಮೂಲ ಮಾಡುವುದಕ್ಕೆ ಒಂದು ಸ್ಕೀಂ ಅನ್ನು ರಾಂಚ್ ಮಾಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಅಲ್ಲಿ ಈ ಖಾಯಿಲೆಗಳನ್ನು ಡಿಟೆಕ್ಟ್ ಮಾಡುವುದಕ್ಕೆ ಪಿ.ಎಚ್.ಸಿ. ಸ್ಟಾಫ್ ಇದೆ, ಟ್ರೀಟ್ ಮಾಡುವುದಕ್ಕಿಂತ ಮುಂಚೆ ಇವರು ಅಲ್ಲಿಗೆ ಹೋಗಿ ಎಕ್ಸಾಮಿನ್ ಮಾಡ ಬೇಕು ಎಂದು ಇದೆ. ಹಳ್ಳಿಗಳಿಗೆ ಹೋಗಿ ನೋಡಬೇಕು ಎಂದೂ ಇದೆ. ಸ್ಟಾಫ್‌ನವರು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎನ್ನುವ ಮಾತು ಬೇರೆ. ಅಲ್ಲ ಸಾಕಾದಷ್ಟು ಸಿಬ್ಬಂದಿ ಇದೆ. ತಾವು ಹೇಳಿದ ಪ್ರಕಾರ ಹಳ್ಳಿಗಾಡುಗಳಲ್ಲಿರತಕ್ಕ ಜನರಿಗೆ ಮಲೇರಿಯಾವನ್ನು ನೋಡುವ ರೀತಿ ಇದನ್ನೂ ಎಕ್ಸಾಮಿನ್ ಮಾಡಬೇಕು, ಟೆಸ್ಟ್ ಮಾಡಬೇಕು ಎಂದು ಆದೇಶ ಕೊಡುತ್ತೇನೆ.

Sri RAJA PID NAIK.—In view of a large number of T.B. cases in Gulbarga District, will the Government consider opening of a sanitorium in Shorapur taluk as it is a suitable place ?

Sri H. SIDDAVEERAPPA.JI will get it examined.

OCTROI LEVIED IN ARSIKERE, TIPTUR AND BANAVARA

93. Sri H. S. SIDDAPPA (Arsikekre).—

Will the Minister for Law and Municipal Administration be pleased to state :—

(*a*) the rate of octroi levied in Arsikere Municipality on Coconut and Copra and the rate of octroi levied by the Municipalities of Tiptur and Banavara ;

(*b*) the reasons for levying this high rate which affects the business of Arsikere Market and diverts the business to the markets where low rate octroi is prevailing;

(*c*) whether it is a fact that public as well as members of the R.M.C. have represented to the Minister for Municipal Administration and the Chief Mnister to reduce the rate of Octroi in Arsikere Municipality;

(*d*) whether it is a fact that the municipality has resolved unanimously to reduce the rate of octroi;

(*e*) if so, when this would be reduced?

Sri D. K. NAIKAR (Minister for Law and Municipal Administration).—

(*a*)	*Arsikere*	*Tiptur*	*Banavara*
Coconut per 100	20 paisa	10 paisa	20 paisa
Copra per 10 kgs.	20 paisa (per 40 kgs)	20 paisa	25 paisa

(*b*) The rate levied is not high. The rates are far below the maximum rates specified in Schedule II of Karnataka Municipalities Act, 1964.

(*c*) Yes.

(*d*) Yes.

(e) The question will be examined as soon as the proposal is received.

ಶ್ರೀ ಎಚ್. ಎಸ್. ಸಿದ್ದಪ್ಪ.—ತಮ್ಮ ಉತ್ತರದಲ್ಲಿ ಅರಸಿಕೆರೆಯಲ್ಲಿ 20 ಪೈಸೆ, ತಿಪಟೂರಿನಲ್ಲಿ 10 ಪೈಸೆ, ಮತ್ತು ಬಾಣಾವರದಲ್ಲಿ 2 ಪೈಸೆ ಆಕ್ಟ್ರಾಯಿ ಇದೆ ಎಂದು ಹೇಳಿದ್ದೀರಿ. ಇದರಿಂದ ಅರಸಿಕೆರೆಗೆ ಬರಕ್ಕೆಂಥಹ ಕೋಪ್ರ ಬಾಣಾವರಕ್ಕೆ ಹೋಗುತ್ತಿದೆ ಎಂದು ಸಾರ್ವಜನಿಕ ಮುನವಿಗಳು ಬಂದಿವೆಯೇ ಮತ್ತು ಇದರಿಂದಾಗಿ ಅರಸೀಕೆರೆಯ ರೈತರು ಹೆಚ್ಚು ಆಕ್ಟ್ರಾಯಿ ಕೊಡತಕ್ಕಂತಹ ಪರಿಸ್ಥಿತಿ ಬಂದಿದೆ. ಮತ್ತು ಮೈಸೂರು ರಾಜ್ಯದಲ್ಲಿ ಅರಸಿಕೆರೆಯಲ್ಲಿ ಇರುವಷ್ಟು ಆಕ್ಟ್ರಾಯಿ ಎಲ್ಲೆಯಾದರೂ ಇದೆಯೇ ?

† ಶ್ರೀ ಡಿ. ಕೆ. ನಾಯ್ಕರ್.—ಅರಸಿಕೆರೆ, ತಿಪಟೂರು ಮತ್ತು ಬಾಣಾವರದಲ್ಲಿ ಏನು ಆಕ್ಟ್ರಾಯಿ ಇದೆ ಎಂಬುದನ್ನು ಒದಗಿಸಲಾಗಿದೆ. ನನಗೆ ಬಂದ ಮಾಹಿತಿ ಪ್ರಕಾರ ಉತ್ತರದಲ್ಲಿ ಹೇಳಿರುವುದು ನಿಜವಿದೆ. ಮತ್ತು ಅದನ್ನು ಕಡಿಮೆ ಮಾಡಬೇಕೆಂದು ಅಲ್ಲಯ ಜನರು ಕೇಳಿದ್ದಾರೆ. ಇನ್ನು ಹೆಚ್ಚು ಟ್ಯಾಕ್ಸಿನಿಂದ ಅರಸಿಕೆರೆಯ ವ್ಯಾಪಾರ ಬಾಣಾವರಕ್ಕೆ ಅಥವಾ ತಿಪಟೂರಿಗೆ ವರ್ಗವಾಗಿದೆ ಎಂದು ನಮ್ಮ ಗಮನಕ್ಕೆ ಬಂದಿಲ್ಲ. ಕಡಿಮೆ ಮಾಡಬೇಕೆಂದು ಕೇಳಿರುವುದನ್ನು ಡಿವಿಜನಲ್ ಕಮಿಶನರಿಗೆ ಕಳಿಸಿದ್ದೇವೆ. ಅವರಿಂದ ಬಂದನಂತರ ಒಂದು ತೀರ್ಮಾನ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಈ ಬಗ್ಗೆ ಮುಖ್ಯಮಂತ್ರಿಯವರಿಗೆ ಮತ್ತು ಪುರಸಭೆಯ ಆಡಳಿತ ಮಂತ್ರಿಯವರಿಗೆ ಅರಸಿಕೆರೆ ಪುರಸಭೆಯವರು ಭಿನ್ನವತ್ತಳೆಯನ್ನು ಕೊಟ್ಟಾಗ ಇದನ್ನು ಕಡಿಮೆ ಮಾಡಬೇಕೆಂದು ಹೇಳಿದ್ದಾರೆ. ಅದರಂತೆ ಪುರಸಭೆಯವರು 11 ತಿಂಗಳ ಹಿಂದೆ ನಿರ್ಣಯ ಮಾಡಿ ಮುಖ್ಯಮಂತ್ರಿಗಳಿಗೆ ಅದನ್ನು ಕಳಿಸಿಕೊಟ್ಟಿದ್ದಾರೆ. ಮುಖ್ಯಮಂತ್ರಿಯವರು ಅದನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಮೂರು ದಿವಸಗಳಲ್ಲಿ ಪ್ರೊಪೋಸಲ್ಸ್ ಕಳಿಸಿ ಎಂದು ಆದೇಶ ಕೊಟ್ಟಿದ್ದರೂ ಸಹ ಇದುವರೆಗೆ ಅದು ಬಾರದಿರಲು ಕಾರಣವೇನು ?

ಶ್ರೀ ಡಿ. ಕೆ. ನಾಯ್ಕರ್.—ನಿಮ್ಮ ಪುರಸಭೆಯ ಅಧ್ಯಕ್ಷರು 6-11-1973 ರಲ್ಲಿ ನಡೆದ ಮೀಟಿಂಗಿನಲ್ಲಿ ನಿರ್ಣಯ ಮಾಡಿದ್ದಾರೆ. ಅದರ ನಂತರ ನಮ್ಮನ್ನು ಕೇಳಿದ್ದಾರೆ. ಅದು ಬಂದ ನಂತರ ಮಾಡುತ್ತೇವೆಂದು ಹೇಳಿದ್ದೇವೆ.

ಶ್ರೀ ಟಿ. ಎಂ. ಮಂಜುನಾಥ್.—ಹೋದ ವರ್ಷ ತಿಪಟೂರು ಮತ್ತು ಅರಸಿಕೆರೆಯಿಂದ ಆಕ್ಟ್ರಾಯ್ ಎಷ್ಟು ವಸೂಲಾಗಿದೆ ಎಂದು ಹೇಳುತ್ತೀರಾ ?

ಶ್ರೀ ಡಿ. ಕೆ. ನಾಯ್ಕರ್.—ಅದಕ್ಕೆ ನೋಟೀಸ್ ಬೇಕು.

ಶ್ರೀ ಆರ್. ಎಸ್. ಪಾಟೀಲ್.—ಒಂದು ಕಡೆ 20 ಪೈಸೆ, ಇನ್ನೊಂದು ಕಡೆ 25 ಪೈಸೆ ಹೀಗೆ ಒಂದೊಂದು ಕಡೆ ಒಂದೊಂದು ರೀತಿಯಲ್ಲಿ ಆಕ್ಟ್ರಾಯ್ ಇರುವುದರಿಂದ ಎಲ್ಲ ಕಡಿಮೆ ಇನ ಅಲ್ಲಿಗೆ ರೈತರು ಸಾಮಾನುಗಳನ್ನು ಒಯ್ಯುವುದು ಸ್ವಾಭಾವಿಕ. ಆದ್ದರಿಂದ ಎಲ್ಲಾ ಕಡೆಯೂ ಒಂದು ರೀತಿಯ ಯುನಿಫಾರಂ ಆಕ್ಟ್ರಾಯ್ ವಿಧಿಸುವಂತೆ ಮಾಡುವುದು ಯೋಗ್ಯವಲ್ಲವೇ ; ಮತ್ತು ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಡಿ. ಕೆ. ನಾಯ್ಕರ್.—ಕಾನೂನು ಪ್ರಕಾರ ಶೆಡ್ಯೂಲಿನಲ್ಲಿ ಇಂತಿಂಥ ಸರಕುಗಳಿಗೆ ಯಾವ ರೀತಿಯ ರೇಟ್ ಇರಬೇಕೆಂಬುದನ್ನು ನಮೂದು ಮಾಡಿದ್ದಾರೆ. ಆಯಾ ಮುನಸಿಪಾಲಿಟಿಯವರು ತಮಗೆ ಅನುಕೂಲವಾಗುವಂತಹ ರಿಸೊಲ್ಯೂಶನ್ ; ಪಾಸ್ ಮಾಡಿ 20 ಪೈಸೆ, 25 ಪೈಸೆ ಇಟ್ಟುಕೊಂಡಿದ್ದಾರೆ. ಅವರು ಅವರ ಉತ್ಪನ್ನದ ಸಲುವಾಗಿ ಹಾಗೆ ಮಾಡುತ್ತಿದ್ದಾರೆ. ಒಂದು ವೇಳೆ ಹಾಗೆ ಮಾಡಿದ್ದು ಸರಿಯಿಲ್ಲವೆಂದು ಕಂಡು ಬಂದರೆ, ಅದನ್ನು ಕಡಿಮೆ ಮಾಡುವುದಕ್ಕೆ ಅವರಿಗೆ ಅಧಿಕಾರ ಇದೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಕಳೆದ ಅಧಿವೇಶನ ಅಂತ್ಯದಲ್ಲಿ ಸರ್ಕಾರ ಒಂದು ನೋಟೀ ಫಿಕೇಶನ್ ಇಶ್ಯು ಮಾಡಿದೆ. ಅರಸಿಕೆರೆ ಪುರಸಭೆಯಲ್ಲಿ ತೆಂಗಿನಕಾಯಿ ಮೇಲಿನ ಆಕ್ಟ್ರಾಯಿ ಜಾಸ್ತಿ ಇರುವುದರಿಂದ ಸಾರ್ವಜನಿಕರಿಂದ ಬಂದಿರತಕ್ಕ ಮನವಿಯನ್ನು ತಕ್ಷಣ ಪರಿಶೀಲನೆ ಮಾಡುತ್ತೇವೆಂದು ಅದರಲ್ಲಿ ಹೇಳಿದ್ದಾರೆ. ಅದು ತಮ್ಮ ಗಮನಕ್ಕೆ ಬಂದಿದೆಯೇ, ಮತ್ತು ಬಂದಿದ್ದರೆ ಕಾರ್ಯಗತ ಮಾಡುವುದಕ್ಕೆ ಇಷ್ಟು ತಡವಾಗಲು ಕಾರಣವೇನು ? ಆದ್ದರಿಂದ ಅರಸಿಕೆರೆಯ ರೈತರ ಹಿತದೃಷ್ಟಿಯಿಂದ ಈ ರೀತಿಯ ತಾರತಮ್ಯವನ್ನು ತಪ್ಪಿಸಿ, ಪುರಸಭೆಯವರು ಪ್ರಾರ್ಥಿಸಿದಂತೆ ತಕ್ಷಣ ಒಂದು ಆಜ್ಞೆಯನ್ನು ಹೊರಡಿಸುತ್ತೀರಾ ?

ಶ್ರೀ ಡಿ. ಕೆ. ನಾಯ್ಕರ್.—ನಾನಾಗಲೇ ಹೇಳಿದಂತೆ, ಇವೆರಡು ಸರಕುಗಳಿಗೆ ಕಾನೂನು ಪ್ರಕಾರ ಆಕ್ಟ್ರಾಯಿ ವಿಧಿಸಿದ್ದಾರೆ. ಕೆಲವು ಮುನಸಿಪಾಲಿಟಿಯವರು 50 ಪೈಸೆ ಇಟ್ಟುಕೊಂಡಿದ್ದಾರೆ, ಮತ್ತು ಕೆಲವು ಮುನಿಸಿಪಾಲಿಟಿಯವರು 20 ಪೈಸೆ, 10 ಪೈಸೆ ಇಟ್ಟುಕೊಂಡಿರುತ್ತಾರೆ. ಅರಸಿಕೆರೆಯವರು ಕಡಿಮೆ ಮಾಡಬೇಕೆಂದು ಹೇಳಿದ್ದಾರೆ. ಅದನ್ನು ವಿಚಾರ ಮಾಡೋಣ ಎಂದು ಹೇಳಿದ್ದೇವೆ. ಅದನ್ನು ಆಯಾ ಮುನಿಸಿಪಾಲಿಟಿಯವರು ನಿಗದಿ ಮಾಡಿ ಇಟ್ಟುಕೊಂಡಿರುತ್ತಾರೆ.

ಶ್ರೀ ಟಿ. ಎಂ. ಮಂಜುನಾಥ್.—ಕೊಬ್ಬರಿ ಮತ್ತು ತೆಂಗಿನಕಾಯಿಗೆ ಮಾರ್ಕೆಟ್ ಸೆಸ್ ಒಂದು ಪರ್‌ಸೆಂಟ್ ಇದೆ. ಮಾರ್ಕೆಟಿಗೆ ತೆಗೆದುಕೊಂಡು ಬಂದರೆ ಆಕ್ಟ್ರಾಯಿ ತಪ್ಪಿ ಹೋಗುತ್ತದೆ. ಆದರೆ ರೈತರಿಗೆ ಯಾವ ರೀತಿಯ ಸೌಲಭ್ಯ ಕೂಡ ಸಿಗುತ್ತಾ ಇಲ್ಲ. ಆದ್ದರಿಂದ ಆಕ್ಟ್ರಾಯಿಯನ್ನು ಈ ಎರಡು ಸರಕುಗಳಿಗೆ ತೆಗೆದು ಹಾಕುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಡಿ. ಕೆ. ನಾಯ್ಕರ್.—ಸೌಲಭ್ಯ ಸಿಗುತ್ತದೆಯೇ ಇಲ್ಲವೇ ಎಂಬುದರ ಬಗ್ಗೆ ಸರ್ಕಾರವಾದ ಮಾಡುತ್ತಾ ಇಲ್ಲ.

ಶ್ರೀ ಎಚ್. ಎಸ್. ಸಿದ್ದಪ್ಪ.—ಆಕ್ಟ್ರಾಯಿ ಜಾಸ್ತಿಯಾಗಿರುವುದರಿಂದ ವರ್ತಕರು ನೇರವಾಗಿ ಹಳ್ಳಿಯಿಂದ ಬೊಂಬಾಯಿ ಮತ್ತು ಕಾನ್‌ಪುರಕ್ಕೆ ಕಳಿಸುತ್ತಿದ್ದಾರೆ. ಇದರಿಂದಾಗಿ ಪುರಸಭೆಗೆ ಮತ್ತು ರಿಜಿಸ್ಟರ್ಡ್ ಮಾರ್ಕೆಟಿಗೆ ಲುಕ್ಸಾನು ಆಗುತ್ತದೆ. ಆ ದೃಷ್ಟಿಯಿಂದ ಇದನ್ನು ಆದಷ್ಟು ಜಾಗ್ರತೆಯಾಗಿ ಮಾಡಬೇಕೆಂದು ಕಳಕಳಿಯಿಂದ ಮನವಿಮಾಡಿಕೊಳ್ಳುತ್ತೇನೆ.

ಶ್ರೀ ಡಿ. ಕೆ. ನಾಯ್ಕರ್.—ನಾನು ಹೇಳುವುದು ನೈತಿಕ ದೃಷ್ಟಿಯಿಂದ ಕಾನೂನುಬದ್ಧವಾಗಿ ನಡೆಯುತ್ತಿದೆ ಎಂದಲ್ಲ. ಕಾನೂನು ಇದ್ದರೂ ಯಾವ ರೀತಿ ಜನರು ಮಾಡುತ್ತಾರೆಂದು ಮಾನ್ಯ ಸಿದ್ದಪ್ಪನವರಿಗೆ ಗೊತ್ತಿದೆ. ಅದರ ಬಗ್ಗೆ ಸಾಕಷ್ಟು ಕ್ರಮ ತೆಗೆದುಕೊಳ್ಳಲು ಸರ್ಕಾರ ಯೋಚನೆ ಮಾಡುತ್ತಿದೆ.